ಕರ್ನಾಟಕ ಸರ್ಕಾರ

ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ ಮಲ್ಲೇಶ್ವರಂ ಬೆಂಗಳೂರು

ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಪಪೂಶಿ:ರಾಸೇಯೋ:ಗಾಸ್ಮಾಕಾ:05 /2015-16. ದಿನಾಂಕ : 18/06/2016.

ಜ್ಞಾಪನ

ವಿಷಯ:- ಜೂನ್ 24, 25 ಮತ್ತು 26 ರಂದು ಗಾಂಧೀ ಸ್ಮಾರಕ ನಿಧಿ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಆಶ್ರಯದಲ್ಲಿ ವಿಚಾರ ಸಂಕಿರಣ ಮತ್ತು ಗಿಡ ನೆಡುವ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಮತ್ತು ಕಾರ್ಯಕ್ರಮಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಉಲ್ಲೇಖ: ಸಂಖ್ಯೆ:ಯುಸೇಇ/ರಾಸೇಯೋ/ಸಾಮಾನ್ಯ/2016-17 ದಿನಾಂಕ:08.06.2016

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅರಸೀಕೆರೆಯ ಕಸ್ತೂರಿಬಾ ಆಶ್ರಮದಲ್ಲಿ ಜೂನ್ 24, 25 ಮತ್ತು 26 ರಂದು 3 ದಿನಗಳ ಕಾಲ ವಿಚಾರ ಗೋಷ್ಠಿ ಮತ್ತು ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮೇಲಿನ ಉಲ್ಲೇಖದಂತೆ ಸದರಿ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸಹಭಾಗಿತ್ವವನ್ನು ಕೋರಿರುತ್ತೆ. ಇಂದು ಪರಿಸರ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರನ್ನು ತೊಡಗಿಸಿಕೊಳ್ಳುವಂತಹ ಕಾರ್ಯಕ್ರಮಗಳು ಅತಿ ಮುಖ್ಯವಾಗಿದ್ದು ಸದರಿ ಕಾರ್ಯಕ್ರಮವು ಈ ದೃಷ್ಟಿಯಿಂದ ಅಮೂಲ್ಯವಾಗಿದೆ. ಇದರಿಂದ ತಾವು ಸ್ವತಃ ಆಸಕ್ತಿ ವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕೆಂದು ತಮ್ಮನ್ನು ಕೋರುತ್ತಿದ್ದೇನೆ. ಇದರಿಂದ ಅರಸೀಕೆರೆ ಸುತ್ತಮುತ್ತ ಇರುವ ಈ ಕೆಳಕಂಡ ಪದವಿ ಪೂರ್ವ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಮತ್ತು ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳನ್ನು ಸದರಿ ಕಾರ್ಯಕ್ರಮಕ್ಕೆ ನಿಯೋಜಿಸಲು ಕೋರಲಾಗಿದೆ.

| ಕ್ರಸ | ಕಾಲೇಜು | ಕಾಲೇಜು ಸಂಕೇತ ಸಂಖ್ಯೆ: | ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| 1 | ಸರ್ಕಾರಿ ಪ.ಪೂ.ಕಾಲೇಜು, ಕಡೂರು, ಚಿಕ್ಕಮಗಳೂರು ಜಿಲ್ಲೆ | ಎಚ್.ಎಚ್ 006 | 20 |
| 2 | ಸರ್ಕಾರಿ.ಪ.ಪೂ.ಕಾಲೇಜು, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ | ಎಚ್.ಎಚ್ 011 | 30 |
| 3 | ಸರ್ಕಾರಿ.ಪ.ಪೂ.ಕಾಲೇಜು, ಚಿಂದೇನಹಳ್ಳಿ, ಅರಸೀಕೆರೆ ತಾ, ಚಿಕ್ಕಮಗಳೂರು ಜಿಲ್ಲೆ | ಎಲ್.ಎಲ್ 075 | 20 |
| 4 | ಬಾಲಕೀಯರ ಸರ್ಕಾರಿ.ಪ.ಪೂ.ಕಾಲೇಜು, ಅರಸೀಕೆರೆ, ಚಿಕ್ಕಮಗಳೂರು ಜಿಲ್ಲೆ | ಎಲ್.ಎಲ್ 080 | 50 |
| 5 | ಸರ್ಕಾರಿ.ಪ.ಪೂ.ಕಾಲೇಜು, ಬಾಣಾವರ, ಅರಸೀಕೆರೆ ತಾ, ಚಿಕ್ಕಮಗಳೂರು ಜಿಲ್ಲೆ | ಎಲ್.ಎಲ್ 011 | 50 |
| 6 | ಸರ್ಕಾರಿ.ಪ.ಪೂ.ಕಾಲೇಜು, ಜಾವಗಲ್, ಅರಸೀಕೆರೆ ತಾ, ಚಿಕ್ಕಮಗಳೂರು ಜಿಲ್ಲೆ | ಎಲ್.ಎಲ್ 015 | 20 |

ವಿ.ಸೂ:1)ಪ್ರಿನ್ಸಿಪಾಲರ ಪತ್ರ 2)ಲಘು ಹಾಸಿಗೆ 3) ಬಟ್ಟೆಗಳು 4) ಬ್ಯಾಟರಿ 5) ತಟ್ಟೆ - ಲೋಟ ಇತ್ಯಾದಿಗಳನ್ನು ವಿದ್ಯಾರ್ಥಿಗಳು ಜೊತೆಗೆ ತೆಗೆದು ಕೊಂಡು ಹೋಗುವುದು.

Gyathi Reddy

ರಾಜ್ಯ ಸಂಯೋಜನಾಧಿಕಾರಿಗಳು,
ಎನ್.ಎಸ್.ಎಸ್ ಕೋಶ,
ಪದವಿ ಪೂರ್ವ ಶಿಕ್ಷಣ ಇಲಾಖೆ.
ಬೆಂಗಳೂರು.

ಪ್ರತಿ: 1.ಸಹಾಯಕ ನಿರ್ದೇಶಕರು, ಇ-ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.
2. ಕಛೇರಿ ಪ್ರತಿ.